# IN THE COURT OF THE ADDL. SENIOR CIVIL JUDGE & JMFC., GUBBI
# **OS – 222/2023**

Witness present and duly sworn on : 20.01.2026.

Cross Examination: by Counsel for Defendant No.1, 3, 5, 7.

ಈ ದಾವೆಯನ್ನು ನಾನು ಮತ್ತು ನನ್ನ ಅಕ್ಕ ನನ್ನ ತಾಯಿಯ ತಂದೆ ಕೆಂಪಣ್ಣ ರವರ ವಿರುದ್ದ ಸಲ್ಲಿಸಿರುತ್ತೇನೆ. ಭಾಗ ಕೋರಿ ಈ ದಾವೆ ಸಲ್ಲಿಸಿರುತ್ತೇವೆ. ಚಿಕ್ಕಣ್ಣ ನನ್ನ ತಾಯಿಯ ಕಡೆಯಿಂದ ಮುತ್ತಾತ. ಚಿಕ್ಕಣ್ಣ ರವರಿಗೆ ಇಬ್ಬರು ಹೆಂಡತಿಯರು. ಅವರಿಬ್ಬರು ಜೀವಂತ ಇಲ್ಲ. ಚಿಕ್ಕಣ್ಣ ರವರು ಜೀವಂತ ಇಲ್ಲ. ಚಿಕ್ಕಣ್ಣ ಮತ್ತು ಅವರ ಇಬ್ಬರ ಹೆಂಡತಿಯರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಣ್ಣ ರವರ ಹೆಂಡತಿಯರ ಹೆಸರು ಚಿಕ್ಕ ಕೆಂಪಮ್ಮ ಮತ್ತು ಸಿದ್ದಮ್ಮ. ಅವರ ಮದುವೆ ಯಾವಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕ ಕೆಂಪಮ್ಮ ಮತ್ತು ಸಿದ್ದಮ್ಮ ರವರು ಒಂದೇ ಮನೆಯಲ್ಲಿ ಜೊತೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಚಿಕ್ಕ ಕೆಂಪಮ್ಮ ಮತ್ತು ಸಿದ್ದಮ್ಮ ರವರು ಯಾವಾಗ ಮರಣ ಹೊಂದಿದ್ದಾರೆಂದರೆ ನನಗೆ ಗೊತ್ತಿಲ್ಲ.

ಚಿಕ್ಕ ಕೆಂಪಮ್ಮ ರವರಿಗೆ ಇಬ್ಬರು ಮಕ್ಕಳು. ಅವರುಗಳು ಸಿದ್ದಪ್ಪ ಮತ್ತು ಕೆಂಪಮ್ಮ. ಸದರಿ ಸಿದ್ದಪ್ಪ ಮತ್ತು ಕೆಂಪಮ್ಮ ಜೀವಂತ ಇರುವುದಿಲ್ಲ. ಚಿಕ್ಕ ಕೆಂಪಮ್ಮ ರವರು ಎಷ್ಟು ವರ್ಷಗಳ ಹಿಂದೆ ಮರಣ ಹೊಂದಿದ್ದಾರೆಂದರೆ ನನಗೆ ಗೊತ್ತಿಲ್ಲ. ಸಿದ್ದಪ್ಪ ಮತ್ತು ಕೆಂಪಮ್ಮನವರು ಯಾವಾಗ ಮರಣ ಹೊಂದಿದ್ದಾರೆಂದರೆ ನನಗೆ ಗೊತ್ತಿಲ್ಲ. ಸಿದ್ದಪ್ಪನವರಿಗೆ 6 ಜನ ಮಕ್ಕಳು. ಕೆಂಪಮ್ಮ ನವರಿಗೆ ಒಬ್ಬಳೇ ಮಗಳು, ಅವರು ಲಕ್ಷ್ಮಿದೇವಮ್ಮ. ಸದರಿ ಲಕ್ಷ್ಮೀದೇವಮ್ಮನವರು ಜೀವಂತ ಇಲ್ಲ. ಅವರು ಯಾವಾಗ ಮರಣ ಹೊಂದಿದರು ಎಂದರೆ ನನಗೆ ಗೊತ್ತಿಲ್ಲ.

ಚಿಕ್ಕಣ್ಣ ರವರ 2 ನೇ ಹೆಂಡತಿ ಸಿದ್ದಮ್ಮ ರವರಿಗೆ ಒಬ್ಬ ಮಗ ಇದ್ದರು. ಅವರ ಹೆಸರು ಕೆಂಪಣ್ಣ. ಕೆಂಪಣ್ಣ ರವರ ಹೆಂಡತಿಯ ಹೆಸರು ಲಕ್ಷ್ಮೀದೇವಮ್ಮ ಬಿನ್ ಕೆಂಪಮ್ಮ. ಅವರ ಹೆಸರು ಲಕ್ಷ್ಮಮ್ಮ ಎಂದರೆ ಸರಿಯಲ್ಲ. ಕೆಂಪಣ್ಣ ರವರಿಗೆ ಇಬ್ಬರು ಮಕ್ಕಳು. ಕೆಂಪಣ್ಣ ರವರು

ಮದುವೆ ಯಾವಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಕೆಂಪಣ್ಣ ರವರ ಮಕ್ಕಳು ಕರೇಗೌಡ ಮತ್ತು ಸಿದ್ದಮ್ಮ. ಕರೇಗೌಡರವರು ಜೀವಂತ ಇದ್ದಾರೆ. ನಮ್ಮ ತಾಯಿ ಸಿದ್ದಮ್ಮ ರವರು ಜೀವಂತ ಇಲ್ಲ. ಸಿದ್ದಮ್ಮ ರವರು 2009 ರಲ್ಲಿ ಮರಣ ಹೊಂದಿದ್ದಾರೆ. ಲಕ್ಷ್ಮೀದೇವಮ್ಮ ರವರು ಮರಣ ಹೊಂದಿದಾಗ ಆಸ್ತಿಗಳು ಯಾರ ಹೆಸರಿನಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ಸರ್ವೆ ನಂ.32 ರಲ್ಲಿ 1 ರಿಂದ 8 ಭಾಗಗಳಿಗೆ ಸಲ್ಲಿಸಿರುತ್ತೇವೆ. ಚಿಕ್ಕಣ್ಣ ರವರ ಹೆಸರಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಈಗ ಯಾರ ಹೆಸರಿನಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ.

ಸಿದ್ದಪ್ಪ ಮತ್ತು ಹನುಮಕ್ಕ ರವರಿಗೆ ಒಟ್ಟು ಆರು ಜನ ಮಕ್ಕಳು. ಅವರುಗಳು ಬಸವಣ್ಣ, ಶಿವಮ್ಮ, ಗಂಗಮ್ಮ, ರಾಜಣ್ಣ, ಕೆಂಪಣ್ಣ, ಪುಟ್ಟಸಿದ್ದಯ್ಯ. ಅವರಲ್ಲಿ ರಾಜಣ್ಣ, ಪುಟ್ಟಸಿದ್ದಯ್ಯ ರವರು ಜೀವಂತ ಇದ್ದಾರೆ. ಶಿವಮ್ಮ, ಗಂಗಮ್ಮ, ಕೆಂಪಣ್ಣ ರವರು ಜೀವಂತ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. ಕೆಂಪಣ್ಣ ಮತ್ತು ಅವರ ಹೆಂಡತಿ ತೇಜಮ್ಮ ರವರಿಗೆ ಮಕ್ಕಳು ಇರುವುದಿಲ್ಲ. ಚಿಕ್ಕಣ್ಣ ರವರು ಯಾವಾಗ ಮರಣ ಹೊಂದಿದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಪ್ರತಿವಾದಿಗಳ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ.

(Further cross-examination of deferred at the request of the counsel for the defendant)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi